**ಓ.ಎಸ್. ನಂ. 386/2008**
**ಡಿ.ಡಬ್ಲ್ಯೂ -2**

**(ಇಂದು ದಿನಾಂಕಃ 28-01-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**

**ವಾಟೀ ಸವಾಲು : ವಾದಿ ಪರ ವಕೀಲರಿಂದಃ**

ಮೊದಲಿಗೆ ಈ ದಾವೆಯನ್ನು ಯಲ್ಲಪ್ಪಾ ಬಸವಣ್ಣೆಪ್ಪಾ ಹಮ್ಮಿನಿ ರವರು ದಾಖಲಿಸಿದ್ದರು ಎಂದರೆ ಸರಿ. ಸದರಿ ಯಲ್ಲಪ್ಪಾ ರವರು ಮಾಡಿದ ದಾವೆಗೆ ನಾನು ತಕರಾರು ಕೊಟ್ಟಿರುತ್ತೇನೆ ಎಂದರೆ ಸರಿ. ಯಲ್ಲಪ್ಪಾ ರವರು ನೀಡಿರುವ ವಾದ ಪತ್ರದಲ್ಲಿ ಈರಪ್ಪಾ ಬಸವಂತಪ್ಪ ರವರ ಮಗ ಆಗಿರುವುದಿಲ್ಲ ಎಂದು ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಪ್ರತಿವಾದ ಪತ್ರವನ್ನು ಸಲ್ಲಿಸುವ ಸಂದರ್ಭದಲ್ಲಿ ವಾದ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ವಾದಿ ಈರಪ್ಪಾ ಯಾರ ಮಗ ಎಂದು ನೀವು ವಿಚಾರಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸದರಿ ಅವರು ಬಸವಂತಪ್ಪ ರವರ ಮಗ ಆಗಿರಬಹುದು ಎಂದು ನುಡಿದಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಾನು ಈರಪ್ಪನ ಬಗ್ಗೆ ಏನು ಬರೆದಿರುವುದಿಲ್ಲ ಎಂದರೆ ಸರಿ.

ನನ್ನ ಅಜ್ಜನ ಅಪ್ಪನ ಹೆಸರು ಬಸಪ್ಪ ಆಗಿರುತ್ತದೆ. ಅವರಿಗೆ 3 ಜನ ಮಕ್ಕಳಿದ್ದು ಅವರಲ್ಲಿ 1) ಈರಪ್ಪ, 2)ಬಸಲಿಂಗಪ್ಪ, 3) ಬಸವಣೆಪ್ಪ ಎಂದರೆ ಸರಿ. ನನ್ನ ಅಜ್ಜ ಈರಪ್ಪ 1945 ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಅಜ್ಜ ಈರಪ್ಪಗೆ ಇಬ್ಬರು ಮಕ್ಕಳಿದ್ದು ಅವರಲ್ಲಿ ಒಬ್ಬರು ಬಸಪ್ಪ ಇನ್ನೊಬ್ಬರು ದುಂಡಪ್ಪ ಎಂದರೆ ಸರಿ. ದುಂಡಪ್ಪ ನಮ್ಮ ತಂದೆ ಆಗಿರುತ್ತಾರೆ. ನನ್ನ ತಾಯಿಯ ಹೆಸರು ಗಂಗವ್ವ ಎಂದರೆ ಸರಿ. ಬಸಲಿಂಗಪ್ಪ ರವರ ಮಗನ ಹೆಸರು ಬಸವಂತಪ್ಪ ಎಂದರೆ ಸರಿ. ಬಸವಂತಪ್ಪನ ಮಗನ ಹೆಸರು ಈರಪ್ಪ ಎಂದರೆ ಸರಿ. ಸದರಿ ಈರಪ್ಪ ಇದೆ ದಾವೆಯಲ್ಲಿ ಪ್ರತಿವಾದಿ ನಂ.3 ಆಗಿದ್ದರು ಎಂದರೆ ಸರಿ. ಈರಪ್ಪನ

ದೊಡ್ಡ ಮಗ ಬಸಪ್ಪ ರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಬಸಪ್ಪನ ಮಗ ಬಸವಣೆಪ್ಪ ಎಂದರೆ ಸರಿ. ಸದರಿ ಬಸವಣೆಪ್ಪಗೆ 3 ಜನ ಮಕ್ಕಳು ಇದ್ದು ಸದರಿ ಅವರು ಚನ್ನಪ್ಪ, ಯಲ್ಲಪ್ಪ ಹಾಗೂ ಈರಪ್ಪ ಎಂದರೆ ಸರಿ.

ಬಸಪ್ಪ ರವರು ಮೃತಪಟ್ಟ ನಂತರ ಅವರ ಮನೆ ವ್ಯವಹಾರ ಯಾರು ಮಾಡುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಈರಪ್ಪ, ಬಸಲಿಂಗಪ್ಪ, ಬಸವಣೆಪ್ಪ ರವರ ಊರು ಖನಗಾಂವ ಎಂದರೆ ಸರಿ. ಯಲ್ಲಪ್ಪ ರವರು ದಾವೆ ಸಲ್ಲಿಸಿದಾಗ ನನಗೆ ಹಾಗೂ ಅವರಿಗೆ ಮನಸಾ ಮನಸಾ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಗಾದರೆ ಯಲ್ಲಪ್ಪ ನಿಮ್ಮ ಮೇಲೆ ಯಾಕೆ ದಾವೆ ಹಾಕಿದ್ದರು ಎಂದು ಕೇಳುವ ಪ್ರಶ್ನೆಗೆ ಸಾಕ್ಷಿಯು ಅವರು ಬೇರೆಯವರ ಮಾತು ಕೇಳಿ ಹಾಕಿರುತ್ತಾರೆ ಅದಾದ ನಂತರ ತಪ್ಪಾಗಿರುತ್ತದೆ ಎಂದು ಮರಳಿ ಪಡೆದುಕೊಂಡಿರುತ್ತಾರೆ. ಯಲ್ಲಪ್ಪ ಖುಲ್ಲಾ ಜಾಗೆ ಹಾಗೂ ಮನೆ ಇದ್ದು ಅದರಲ್ಲಿ ಅವರಿಗೆ ಪಾಲು ಇರುತ್ತದೆ ಎಂದು ದಾವೆ ಹಾಕಿದ್ದರು. ಯಲ್ಲಪ್ಪ ಹೊಲದ ಸಂಬಂಧ ಕೂಡಾ ದಾವೆ ಹಾಕಿದ್ದರು ಎಂದರೆ ಸರಿ. ಯಲ್ಲಪ್ಪ ವಾದ ಪತ್ರದಲ್ಲಿ ಮನೆ ಹಾಗೂ ಖುಲ್ಲಾ ಜಾಗೆ ಎಂದು ಬರೆದಿದ್ದರು ಎಂದರೆ ಸರಿಯಲ್ಲ. GPC 253 ಆಸ್ತಿ ಮನೆ ಆಗಿರುತ್ತದೆ. ಸದರಿ ಮನೆಯ ಹಿಂದೆ ಖುಲ್ಲಾ ಜಾಗೆ ಇತ್ತು, ಹಿಂದುಗಡೆ ಹಿತ್ತಲು ಇತ್ತು. ಸದರಿ ಹಿತ್ತಲು ಹಾಗೂ ಮನೆ ಕೂಡಿಕೊಂಡು ಒಂದೇ ಇತ್ತು ಎಂದರೆ ಸರಿ.

ಸರ್ವೆ ನಂ.282/3 ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಅಜ್ಜನ ಆಸ್ತಿ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಮ್ಮ ಅಜ್ಜಗೆ ಆಸ್ತಿ ಹೇಗೆ ಬಂತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬಸವಣೆಪ್ಪ ಹಾಗೂ ಬಸಲಿಂಗಪ್ಪ ಕೂಡಿ ನಮ್ಮ ತಂದೆಯ

ಪಾಲನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಈರಪ್ಪ, ಬಸಲಿಂಗಪ್ಪ ಹಾಗೂ ಬಸವಣೆಪ್ಪ ರವರಲ್ಲಿ ಹಿರಿಯರು ಯಾರು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಆದರೆ ಈರಪ್ಪ ಸಣ್ಣವರು ಆಗಿರುತ್ತಾರೆ ಎಂದು ನುಡಿದಿರುತ್ತಾರೆ. ಈರಪ್ಪ ಸಣ್ಣ ಮಗ ಆಗಿದ್ದರು ಎಂದು ತೋರಿಸಲು ಮ್ಯುಟೇಶನ ಇರುತ್ತದೆ. ಈರಪ್ಪ ರವರಿಗೆ ಆಸ್ತಿ ಬಿಟ್ಟು ಕೊಟ್ಟ ಬಗ್ಗೆ ನ್ಯಾಯಾಲಯದಲ್ಲಿ ಡಿಕ್ರಿ ಆಗಿದೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**(Smt. Surya Prabha H.D)**

**Addl. CJ & JMFC, Gokak**